O.S. No. 655 / 2014
Pw.1

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 27-06-2018.

<u>**ಪಾಟೀ ಸವಾಲು ಃ-**</u> **2 ನೇ ಪ್ರತಿವಾದಿಯಿಂದ**

ನಿಪಿ-14 ರ ಪ್ಯಾರಾ 21 ರಲ್ಲಿ ಮೇಲ್ಮನವಿದಾರರು ಸ್ವಾಧೀನತೆಯನ್ನು ಉಳಿಸಿಕೊಂಡು 3 ನೇ ಎದುರುದಾರನಿಗೆ ಅನುಮತಿ ಸ್ವಾಧೀನತೆ ನೀಡಿರುತ್ತಾರೆ ಎಂದು ಉಲ್ಲೇಖವಿದೆ ಎಂದರೆ ಸರಿ. ನಾನು ಚೆಕ್ ದಿಃ 07-05-2007 ಕ್ಕೆ ಅಧಿಕಾರ ಪತ್ರ ಹಿಂಪಡೆದ ಒಂದುವರೆ ವರ್ಷಗಳ ನಂತರ ಕೂಡ ಚೆಕ್ ಗೆ ನಾನು ಅಧಿಕಾರ ಪತ್ರದಾರಕನಾಗಿ ಸೀಲ್ ಹಾಕಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೈ ತಪ್ಪಿನಿಂದ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಚೆಕ್ ನ್ನು ಸಹಿ ಮಾಡಿ ನಾನು ನೀಡುವ ಮುಂಚೆ ಚೆಕಿನ ಪೇಯಿ ನನಗೆ ನೋಟಿಸ್ ಕೊಟ್ಟು ಅಧಿಕಾರ ಪತ್ರ ಹಿಂಪಡೆದ ಬಗ್ಗೆ ತಿಳಿಸಿದರು ಎಂದರೆ ಸರಿಯಲ್ಲ. ನನ್ನ ಮೂವರು ಮೃತ ಸಹೋದರರು ಮತ್ತು ನನ್ನನ್ನು ಒಳಗೊಂಡ ಕುಟುಂಬಕ್ಕೆ ನಾನು ಕರ್ತನಾಗಿದ್ದೆ ಎಂದರೆ ಸರಿ. ನಾನು ಪಿ.ಯು.ಸಿ ಯವರೆಗೆ ಓದಿದ್ದೇನೆ. ನಾನು ಕೈಗಾರಿಕೋದ್ಯಮಿ ಎಂದರೆ ಸರಿ. ಆದರೆ ನಾನು ಶ್ರೀಮಂತ ಕೈಗಾರಿಕೋದ್ಯಮಿ ಅಲ್ಲ. ನಾನು ಈಗ ಎನ್.ಸಿ.ಹ್ಯಾರೋಮೇಟಿಕ್ ಖಾಸಗಿ ಕಂಪನಿಯ ಚೇರ್ಮೇನ್ ಎಂದರೆ ಸರಿ. ಕಳೆದ ಒಂದು ವರ್ಷದಿಂದ ನಾನು ಚೇರ್ ಮೆನ್ ಆಗಿದ್ದೇನೆ. ಸದರಿ ಕಂಪನಿ ಎನ್.ಸಿ. ಹ್ಯಾರೋಮೇಟಿಕ್ ಆಗುವ ಮುಂಚೆ ಶಕ್ತಿ ಎಕ್ಸ್ ಟ್ರಾಕ್ಟ್ ಕ್ಸ್ ಪಾಲುದಾರಿಕೆ ಸಂಸ್ಥೆ ಆಗಿತ್ತು ಎಂದರೆ ಸರಿ. ನಾನು ಅದಕ್ಕೆ ಮ್ಯಾನೇಜೆಂಗ್ ಪಾರ್ಟನರ್ ಆಗಿದೆ ಎಂದರೆ ಸರಿ. ನಾನು ಸದಾಕಾಲ ಆ ಕಂಪನಿಯ ಆಡಳಿತ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ಎನ್.ಸಿ. ಹ್ಯಾರೋಮೇಟಿಕ್ ಕಂಪನಿ ವರ್ಷಕ್ಕೆ 40 ರಿಂದ 60 ಕೋಟಿ ವ್ಯವಹಾರ ಇದೆ ಎಂದರೆ ಸರಿ. ಸದರಿ ಸಂಸ್ಥೆಯ ವಾರ್ಷಿಕ ಆದಾಯ 6 ರಿಂದ 8 ಕೋಟಿ ಎಂದರೆ ಇರಬಹುದು. ಅದರಲ್ಲಿ ನನಗೆ 30 ಪ್ರತಿಶತ ಪಾಲು ಇದೆ ಎಂದರೆ ಸರಿ. ನಾನು 35 ಎಕರೆ ಫಲವತ್ತಾದ ಜಮೀನನ್ನು ಮೆಟ್ಟುಪಾಳ್ಯಂ ತಮಿಳುನಾಡಿನಲ್ಲಿ ಹೊಂದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ 12 ಎಕರೆ ಇದೆ ಎಂದು ಹೇಳುತ್ತಾರೆ. ನನಗೆ ಸದರಿ ಜಮೀನಿನಿಂದ ಆದಾಯ ಇದೆ ಎಂದರೆ ಸರಿ.

ನನ್ನ ಒಟ್ಟು ಕುಟುಂಬದ ಎಲ್ಲಾ ದಾಯಾದಿಗಳಿಗೂ ನಾನು ಈ ದಾವೆ ಸಲ್ಲಿಸಿದ ಸಂಗತಿ ಗೊತ್ತಿದ್ದೆ. ಅವರಿಗೆ ಈ ದಾವೆಯ ಬಗ್ಗೆ ಒಪ್ಪಿಗೆ ಕೂಡ ಇದೆ. ವಸಂತ ಪದ್ಮನಾಭನ್ ರವರಿಗೂ ಕೂಡ ಒಪ್ಪಿಗೆ ಇದೆ. ವಸಂತ ಪದ್ಮನಾಭನ್ ರವರು ಈ ದಾವೆ ಸಲ್ಲಿಸಲು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ. ವಸಂತ ಪದ್ಮನಾಭನ್ ಕೂಡ ಒಬ್ಬರು ದಾಯಾದಿ. ಅಧಿಕಾರಪತ್ರದಾರಕನಾಗಿ ನಾನು ಕಾನೂನಾತ್ಮಕ ಕೆಲಸ ಮಾತ್ರ ಮಾಡಬೇಕು ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಎಲ್ಲಾ ದಾಯಾದಿಗಳಿಗೆ ಕುಟುಂಬದಲ್ಲಿ ವಿಭಾಗ ಆಗಿಲ್ಲ ಮತ್ತು ಆ ಸಂಬಂಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಬಾಕಿ ಇರುವುದು ಗೊತ್ತು ಎಂದರೆ ಸರಿ. ನಾನು ದಶಕಗಳಿಂದ ಅಕೌಂಟ್ಸ್ ಏಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಅಕೌಂಟ್ಸ್ ಇಟ್ಟಿದ್ದೇನೆ ಮತ್ತು ಕುಟುಂಬದ ಸದಸ್ಯರಿಗೆ ಅದನ್ನು ನೀಡಿದ್ದೇನೆ. ಕುಟುಂಬದಲ್ಲಿ ಭಾಗ ಆಗಿಲ್ಲ ಎಂದು ಹೇಳುತ್ತಿದ್ದರು 1 ನೇ ಪ್ರತಿವಾದಿಗೆ ಅಕೌಂಟ್ಸ್ ನೀಡಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಹಿಂದೂ ಕಾಯ್ದೆ ಪ್ರಕಾರ ಹೆಣ್ಣು ಮಗಳಿಗೆ ಸಮಾನ ಭಾಗಾಂಶದ ಹಕ್ಕು ಇದೆ ಎಂದರೆ ಸಾಕ್ಷಿ ನ್ಯಾಯಾಲಯ ತೀರ್ಮಾನಿಸಲೀ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂಭತ್ತು ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಡಿ -6 ರಿಂದ 14 ಎಂದು ಗುರುತಿಸಲಾಯಿತು. ನಿಡಿ-9 ರಲ್ಲಿ ಟ್ರಾಕ್ಟರ್ ಪಕ್ಕ ನಿಂತಿರುವ ಹೆಣ್ಣು ಮಗಳು ನನ್ನ ಮಗಳು ಎಂದರೆ ಸರಿ. ನಿಡಿ-6 ಮತ್ತು 7 ದಾವಾ ಸ್ವತ್ತಿನ ಫೋಟೋ ಗಳು ಎಂದರೆ ಸರಿ. ನಿಡಿ -8 ದಾವಾ ಸ್ವತ್ತಿನಲ್ಲಿರುವ ಮನೆ ಫೋಟೋ ಎಂದರೆ ಸರಿ. ಮನೆ ಮುಂದಿರುವುದು ನನ್ನ ಮಗಳು ಎಂದರೆ ಸರಿ. ನಿಡಿ-6 ರಿಂದ 14 ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ.

ನಿಪಿ-8 ರಲ್ಲಿರುವ ಮನೆಗೆ 80 ವರ್ಷ ಆಗಿರಬಹುದು. ಸದರಿ ಮನೆ ಲಾಕ್ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ಯಾರು ವಾಸ ಮಾಡುತ್ತಿಲ್ಲ ನಾವು ತೆಂಗಿನ ಫಸಲು ಇಡಲು ಉಪಯೋಗ ಮಾಡುತ್ತೇವೆ ಎಂದು ಹೇಳುತ್ತಾರೆ. ಸದರಿ ಮನೆಯಲ್ಲಿ ವಾಸ ಮಾಡಬಹುದಾ ಎಂದರೆ ಸಾಕ್ಷಿ ತುಂಬಾ ಕಷ್ಟ ಏಕೆಂದರೆ ಅದು ಹಳೆಯ ಮನೆ. ಸದರಿ ಮನೆಯನ್ನು ವಾಸಕ್ಕೆ ಯೋಗ್ಯವಾಗಿಡುವಂತೆ ನಾನು ರಿಪೇರಿ ಮಾಡಿಸಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ರಿಪೇರಿ ಮಾಡಿಸುವ ಪ್ರಸಂಗ ಬರಲಿಲ್ಲ

ಎಂದು ಹೇಳುತ್ತಾರೆ. ಸ್ಟೋರೇಜ್ ರೂಮ್ ಬೀಳುವ ಸ್ಥಿತಿಯಲ್ಲಿದೆ ಎಂದರೆ ಸರಿ. ಸ್ಟೋರೇಜ್ ರೂಮ್ ನಲ್ಲಿ ನಮ್ಮ ವಸ್ತುಗಳನ್ನು ಅಂದರೆ ತೆಂಗಿನಕಾಯಿ ಫಸಲು ಇಡುತ್ತಿದ್ದೇವೆ. ಮುಖ್ಯ ಮನೆಯಲ್ಲಿ ಕೂಡ ತೆಂಗಿನ ಫಸಲು ಇಡುತ್ತೇವೆ. 1 ನೇ ಪ್ರತಿವಾದಿ ಮತ್ತು ಇನ್ನೊಬ್ಬರನ್ನು ಹೊರತುಪಡಿಸಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ತಮಿಳುನಾಡಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ಆ ರೀತಿ ಇಲ್ಲಿ ವಾಸವಿರುವ ಇನ್ನೊಂದು ಕುಟುಂಬ ಅಂದರೆ ಚಂದಪ್ಪ ಕುಟುಂಬ. ಚಾಂದಪ್ಪ ಕುಟುಂಬ ತಮಿಳುನಾಡಿನಲ್ಲಿ ಸುಮಾರು 100 ಎಕರೆ ಜಮೀನು ಹೊಂದಿದೆ ಎಂದರೆ ಇರಬಹುದು. ನಾನು ಮತ್ತು ನನ್ನ ಎಲ್ಲಾ ಸಹೋದರರು ತಮಿಳುನಾಡಿಯಲ್ಲಿ ಕನಿಷ್ಟ ತಲಾ 100 ಎಕರೆ ಜಮೀನು ಹೊಂದಿದ್ದೇವೆ ಎಂದರೆ ಸರಿಯಲ್ಲ. ನಾನು ತಮಿಳುನಾಡಿನಲ್ಲಿ 12 ಎಕರೆ ಜಮೀನು ಹೊಂದಿದ್ದೇನೆ. ಚಾಂದಪ್ಪ ಕುಟುಂಬ ಎನ್.ಸಿ. ಹ್ಯಾರೋಮೇಟಿಕ್ಸ್ ಕಂಪನಿ ವ್ಯವಹಾರದಲ್ಲಿ ಇದೆ ಎಂದರೆ ಸರಿ. ಚಾಂದಪ್ಪನ ಇಬ್ಬರು ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಹೊಂದಿ ತಮ್ಮ ತಮ್ಮ ವೃತ್ತಿಯಲ್ಲಿ ನಿರತರಾಗಿದ್ದಾರೆ ಎಂದರೆ ಸಾಕ್ಷಿ ಅವರು ಇರುವುದು ನಿಜ ಅವರ ವೃತ್ತಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಇಬ್ಬರು ಹೆಣ್ಣು ಮಕ್ಕಳು ದಾವಾ ಸ್ವತ್ತು ನೋಡಲು ಬರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರು ನನಗೆ ಜವಾಬ್ದಾರಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ನಮ್ಮ ಕುಟುಂಬದ ಪಿತಾರ್ಜಿತ ಸ್ವತ್ತುಗಳು ಮತ್ತು ಅವುಗಳಲ್ಲಿ ಇನ್ನು ಭಾಗ ಆಗಿಲ್ಲ ಎಂದರೆ ಸರಿ.

ಕುಟುಂಬದ ಕರ್ತನಾಗಿ 1 ನೇ ಪ್ರತಿವಾದಿಗೆ ಯಾವ ಕಾರಣಕ್ಕಾಗಿ ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿ ಇರಲು ನಾನು ಬಿಡುತ್ತಿಲ್ಲ ಎಂದರೆ ಸಾಕ್ಷಿ ನಾನು ಜೀವಂತ ಇರುವವರೆಗೆ ನಾನೇ ಮಾಲೀಕ ಎಂದು ಹೇಳುತ್ತಾರೆ. ನನಗೆ ಈಗ 86 ವರ್ಷ ವಯಸ್ಸು. ನಾನು ಮಾನಸಿಕವಾಗಿ ಚೆನ್ನಾಗಿದ್ದೇನೆ. ನಾನು ವಯಸ್ಸಿನ ಕಾರಣದಿಂದ ಪ್ರಯಾಣ ಮಾಡಲು ಆಗುವುದಿಲ್ಲ ಆ ಕಾರಣದಿಂದ ನನ್ನ ಅಳಿಯನಿಗೆ ಅಧಿಕಾರಪತ್ರ ಬರೆದುಕೊಟ್ಟಿದ್ದೇನೆ. ನನಗೆ ಸ್ವತಃ ದಾವಾ ಸ್ವತ್ತುಗಳಿಗೆ ಬಂದು ಉಸ್ತುವಾರಿ ನೋಡಿಕೊಳ್ಳಲು ಆಗುವುದಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಗಳ ಉಸ್ತುವಾರಿಯನ್ನು ನನ್ನ ಅಳಿಯನಿಗೆ ಮತ್ತು ಇತರ ದಾಯಾದಿಗಳಿಗೆ ಕೊಟ್ಟಿದ್ದೇನೆ. ದಾವಾ ಸ್ವತ್ತುಗಳ ಉಸ್ತುವಾರಿ ನಾವೇ ನೊಡುತ್ತೇವೆ ಮತ್ತು ಕೆಲಸಕ್ಕೆ ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ನಾನು ಆ ರೀತಿ ಜನರನ್ನು ನೇಮಕ ಮಾಡಿಕೊಂಡ ಬಗ್ಗೆ

ದಾಖಲಾತಿ ಇಲ್ಲ. ಕೆಲಸದ ಆಳುಗಳ ಕೆಲ ಹೆಸರನ್ನು ಹೇಳಬಲ್ಲಿರಾ ಎಂದರೆ ಸಾಕ್ಷಿ ಬದಲಾಗುತ್ತಾ ಇರುತ್ತಾರೆ ಎಂದು ಹೇಳುತ್ತಾರೆ. ಗೌಡಗೆರೆ ಕೇಶವನಿಗೆ ನಾನು ದಾವಾ ಸ್ವತ್ತುಗಳನ್ನು ನೋಡಿಕೊಳ್ಳಲು ಹೇಳಿಲ್ಲ. ನಾನು ಕಾಮಾಕ್ಷ ಎನ್ನುವ ಹೆಸರಿನ ಯಾರಿಗೂ ಕೂಡ ದಾವಾ ಸ್ವತ್ತುಗಳನ್ನು ನೋಡಿಕೊಳ್ಳಲು ಹೇಳಿಲ್ಲ. ಗೌಡಗೆರೆ ಕೇಶವನ ಸಂಬಂಧಿಗೆ ಕೂಡ ಉಸ್ತುವಾರಿ ಕೊಟ್ಟಿಲ್ಲ. ಆದರೆ ದಿನಗೂಲಿ ಮೇಲೆ ಕೆಲಸಕ್ಕೆ ಬರುತ್ತಿದ್ದರು ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲಾತಿ ಇಲ್ಲ. ಕಳೆದ ಒಂದು ವರ್ಷದಿಂದ ಗೌಡಗೆರೆಗೆ ಕೇಶವನ ಸಂಬಂಧಿ ದಾವಾ ಸ್ವತ್ತುಗಳಲ್ಲಿ ಕೆಲಸ ಮಾಡುತ್ತಾರೆ. ನಿಪಿ-26, 27, 28 ಪ್ರತಿವಾದಿ ಸಲ್ಲಿಸಿದ ಕಲಂ 354 ಐಪಿಸಿ ಅಡಿ ಪ್ರಕರಣದ ಅಂತಿಮ ವರದಿಯ ಕೆಲವು ಪುಟಗಳು ಎಂದರೆ ಸರಿ. ಸಾಕ್ಷಿಗೆ ಒಂದು ಶಾಲಾ ಪ್ರಮಾಣಪತ್ರ ತೋರಿಸಲಾಗಿ ಅದು ನನ್ನ ಮಗಳು 1 ನೇ ಪ್ರತಿವಾದಿಯ ಶಾಲಾ ದಾಖಲಾತಿ ಎಂದು ಹೇಳುತ್ತಾರೆ. ಅದನ್ನು ನಿಡಿ-15 ಎಂದು ಗುರುತಿಸಲಾಯಿತು. ನಿಡಿ-15 ರಲ್ಲಿ ನನ್ನ ಮಗಳ ಜನ್ಮ ದಿನಾಂಕ- 14-01-1962 ಎಂದು ತೋರಿಸಿದೆ. ನಿಪಿ-26 ರಿಂದ 28 ಅಂತಿಮ ವರದಿಯನ್ನು 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳ ಪ್ರವೇಶಕ್ಕೆ ತಡೆ ಒಡ್ಡಿದ್ದಾಗ ಆಯಿತು ಎಂದರೆ ಸರಿಯಲ್ಲ. ನಾನು ನನ್ನ ಏಜೆಂಟ್‌ರ ಕಾನೂನುಬಾಹಿರ ಕೆಲಸಗಳಿಗೆ ಅದು ನನಗೆ ತಿಳಿದಂತೆ ನಡೆದರೆ ಜವಾಬ್ದಾರ ಎಂದರೆ ಸರಿ. ನಾನು ಕಳೆದ ಬಾರಿ ಪಾಟೀಸವಾಲಿನಲ್ಲಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡುವ ಬಗ್ಗೆ ನಾನು ಯೋಚನೆ ಮಾಡಿಲ್ಲ ಎಂದು ಹೇಳಿದ್ದೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಒಪ್ಪಿ ನಾನು ಸುಮಾರು ಜನರಿಂದ ಮುಂಗಡ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಕ್ರಿಮಿನಲ್ ಕಂಪ್ಲೆಂಟ್ ನಂಬರ್ 38/2017 ನ್ನು ಮೆಟ್ಟುಪಾಳ್ಯಂ ನ್ಯಾಯಾಲಯದಲ್ಲಿ ಕುಟುಂಬದ ಎಲ್ಲಾ ದಾಯಾದಿಗಳ ವಿರುದ್ಧ ವಂಚನೆ ಸಂಬಂಧ ದಾಖಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದನ್ನು ವಿನಾಃ ಕಾರಣ ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಅದು ರಾಜಿ ಆಗಲು ಬರದ ಅಪರಾಧ ಎಂದರ ಸರಿ. ನನ್ನ ವಾದಪತ್ರ ಪ್ಯಾರಾ 10 ರಲ್ಲಿ ಹೇಳಿರುವುದು ಸರಿ. ಅಸಲು ದಾವಾ ನಂಬರ್ 804/2008 ರಲ್ಲಿ ದಿಃ 07-02-2011 ರ ನನ್ನ ಪಾಟೀಸವಾಲಿನಲ್ಲಿ ನಮ್ಮ ಮಧ್ಯೆ ವೈಮನಸ್ಸು ಅಬಿಪ್ರಾಯ ಭೇಧವಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ಪಾಟೀಸವಾಲನ್ನು ತೋರಿಸಲಾಗಿ ಅದು ನಾನು ಹೇಳಿದ ಸಾಕ್ಷಿ ವಿಚಾರಣೆ ಎಂದು ಹೇಳಿದ್ದು ಅದನ್ನು ನಿಡಿ-16 ಎಂದು ಗುರುತಿಸಲಾಯಿತು. ನಾನು 1 ನೇ ಪ್ರತಿವಾದಿಯ ಅಧಿಕಾರ

ಪತ್ರ ದಾರಕನಾಗಿದ್ದ ಸಮಯದಲ್ಲಿ ಅವಳ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿದೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ಏಜೆಂಟ್ ನಾಗಿ ನಾನು ಪಾರ್ಟಿಯಾಗಿದ್ದೆ ಎಂದರ ಸರಿ. 1 ನೇ ಪ್ರತಿವಾದಿ ಬೆಂಗಳೂರಿನ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅಸಲು ದಾವಾ ನಂಬರ್ 6285/2008 ರಲ್ಲಿನ ನಿಡಿ-3 ಆದೇಶ ಪ್ರತಿ ಪುಟ 4 ರಲ್ಲಿ ನ್ಯಾಯಾಲಯ ದಾವೆ ಬಾಕಿ ಇರುವಾಗ ಸ್ವತ್ತುಗಳ ಮಾರಾಟ ಕಲಂ 52 ಟಿ.ಪಿ. ಕಾಯ್ದೆ ಯಡಿ ಬರುತ್ತದೆ ಎಂದು ಅಬಿಪ್ರಾಯ ಪಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವಾ ವಜಾ ಆಗಿ ಅಪೀಲು ಬಾಕಿ ಎಂದು ಹೇಳುತ್ತಾರೆ. ಆ ಬಗ್ಗೆ ಉಚ್ಛ ನ್ಯಾಯಾಲಯದಲ್ಲಿ 1226/2016 ಎಂದು ಮೇಲ್ಮನವಿ ಬಾಕಿ ಇದೆ ಎಂದರೆ ಸರಿ. ಸಾಕ್ಷಿಗೆ ಆ ಬಗ್ಗೆ ದಾಖಲಾತಿಗಳನ್ನು ತೋರಿಸಲಾಗಿ ಅವು ಸದರಿ ಅಪೀಲಿಗೆ ಸಂಬಂಧಪಟ್ಟಿದ್ದು ಎಂದು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ಒಟ್ಟಾಗಿ ನಿಡಿ-17 ಎಂದು ಗುರುತಿಸಲಾಯಿತು.

ನಾನು ಹಲವಾರು ನ್ಯಾಯಾಲಯಗಳಲ್ಲಿ ಪ್ರಕರಣ ಗೆಲವು ಏಕೈಕ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿದಿದ್ದೇನೆ ಮತ್ತು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಮೇಲೆ ದ್ವೇಷ ಹೊಂದಿದ್ದೇನೆ ಎಂದರೆ ಸರಿಯಲ್ಲ. ನಾನು ಅವಳಿಗೆ ದಾವಾ ಸ್ವತ್ತುಗಳಲ್ಲಿ ಅವಳ ಹಕ್ಕನ್ನು ನಿರಾಕಾರಿಸಿ ಅವಳ ಭಾಗದ ಸ್ವತ್ತುಗಳನ್ನು ಹೊಡೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ ಎಂದರ ಸರಿಯಲ್ಲ.

**ಮರು ವಿಚಾರಣೆ** :- ಇಲ್ಲ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು.**